# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ಬೆಂಗಳೂರು

******************************************************************************

ಸಂಖ್ಯೆ: W-136/Committee/Proceding -31/2021-22 dt. 17-01-2022

## ಸಭೆಯ ನಡವಳಿಗಳು

ಶ್ರೀ ಸತೀಶ್ ಕುಮಾರ್ ಸಮಿತಿಯ ಕಾರ್ಯದರ್ಶಿಗಳು ಸಭೆಯನ್ನು ನಡೆಸುತ್ತಾ ಸಭೆಯಲ್ಲಿ ಉಪಸ್ಥಿತಗೊಂಡಿರುವ ಮಾನ್ಯ ನೋಡಲ್ ಅಧಿಕಾರಿಗಳಿಗೆ ಮತ್ತು ಉನ್ನತ ಸಭೆಯಲ್ಲಿ ಅಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತಕೋರಿದರು. ನಂತರ ಮಾನ್ಯ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು

### ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬಂದಂತಹ ದೂರುಗಳು ಹಾಗೂ ತಕ್ಷಣ ಗ್ಯಾಂಗ್ ಮೆನ್ ಮತ್ತು ಟ್ರಾಕ್ಟರ್ ಮತ್ತು ಕೂಲಿ ಕಾರ್ಮಿಕರನ್ನು ಉಪಯೋಗಿಸಿಕೊಂಡು ತಕ್ಷಣ ದೂರುಗಳನ್ನು ಪರಿಶೀಲಿಸಿ ಕಾರ್ಯನಿರ್ವಹಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಕಮಿಟಿ ಸದಸ್ಯರು ವಾರ್ಡ್ 136ರ ವ್ಯಾಪ್ತಿಯಲ್ಲಿ ಬರುವ ಹೆಚ್. ಬಿ. ಜಿ ಮುಖ್ಯ ರಸ್ತೆಯಲ್ಲಿ ಕಟ್ಟಡ ತ್ಯಾಜ್ಯವನ್ನು ಹಾಕುತ್ತಿರುವ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಪಿಸಲಾಗಿದ್ದು ಕೈಗೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಕೋರಿದರು

ಅಧ್ಯಕ್ಷರು ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ 136ರ ವ್ಯಾಪ್ತಿಯಲ್ಲಿ ಬರುವ ಹೆಚ್. ಬಿ. ಜಿ ಮುಖ್ಯ ರಸ್ತೆಯಲ್ಲಿ ಕಟ್ಟಡ ತ್ಯಾಜ್ಯವನ್ನು ಪೂರ್ಣಪ್ರಮಾಣದಲ್ಲಿ ತೆಗೆದಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು ಹಾಗೂ ಮುಂದಿನ ದಿನಗಳಲ್ಲಿ ಕಟ್ಟಡ ತ್ಯಾಜ್ಯ ಎಸೆಯುವವರ ಬಗ್ಗೆ ಬಿ.ಬಿ.ಎಂ.ಪಿ ನಿಯಮನುಸಾರ ಕ್ರಮ ಕೈಗೊಳ್ಳು ಮಾರ್ಡ್ ಮಾರ್ಷಲ್‌ಗಳಿಗೆ ತಿಳಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಬೆಸ್ಕಂ ಕಛೇರಿಗೆ ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬೆಸ್ಕಂ ಅಧಿಕಾರಿಯವರು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರುಗಳ ವಿವರ ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಅಧ್ಯಕ್ಷರು ಆರೋಗ್ಯ ಪರಿವೀಕ್ಷಕರು ವಾಡ್-136 ಮತ್ತು ಕೋವಿಡ್-19 ಸೋಂಕಿನ ಬಗ್ಗೆ ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು

ಅಧ್ಯಕ್ಷರು ವಾರ್ಡ್ 136 ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಗುಂಡಿ ಮುಚ್ಚುವಂತೆ ಮಾನ್ಯ ಶಾಸಕರು, ಚಾಮರಾಜ ಪೇಟೆ ವಿಧಾನ ಸಭೆ ಕ್ಷೇತ್ರ ರವರು ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ ಅಡ್ಡರಸ್ತೆಗಳು ಮತ್ತು ಚಿಕ್ಕ ಪುಟ್ಟ ರಸ್ತೆಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ತಿಳಿಸಿದು, ರಸ್ತೆ ಗುಂಡಿಗಳನ್ನು ಗುರ್ತಿಸಿ ಗುಂಡಿಗಳನ್ನು ಮುಚ್ಚುವಂತೆ ಸೂಚಿಸಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್‌ನಲ್ಲಿ ಬರುವ ಅಡ್ಡರಸ್ತೆ ಮತ್ತು ಸಣ್ಣ ರಸ್ತೆಗಳಲ್ಲಿ ಬರುವ ರಸ್ತೆ ಗುಂಡಿಗಳನ್ನು ಗುರ್ತಿಸಿ ಮುಚ್ಚಿಸಲಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಆರೋಗ್ಯ ಪರಿವೀಕ್ಷಕರು ವಾರ್ಡ್ 136ರ ವ್ಯಾಪ್ತಿಯಲ್ಲಿ ಕೋವಿಡ್-19 ಒಮಿಕ್ರಾನ್ ವೈರಸ್ ಹೆಚ್ಚಗುತ್ತಿರುವುದರಿಂದ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸುವಂತೆ ಕೋರಿದರು.

ಮಾನ್ಯ ವೈದ್ಯಾಧಿಕಾರಿಗೆ ಪ್ರತಿನಿಧಿಯಾದ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 136ರ ವ್ಯಾಪ್ತಿಯಲ್ಲಿ ಕೋವಿಡ್-19 ಒಮಿಕ್ರಾನ್ ವೈರಸ್ ಹೆಚ್ಚಗುತ್ತಿರುವುದರಿಂದ ಸರ್ಕಾರಿ ಆದೇಶದಂತೆ ಕಾರ್ಯನಿರ್ವಹಿಸುತ್ತೀರುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಹಾಕುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು ಮತ್ತು 15ರಿಂದ 18 ವರ್ಷದವರಿಗೆ ಸರ್ಕಾರಿ ಆದೇಶದಂತೆ ಲಸಿಕೆ ಹಾಕುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಬಿಡಬ್ಲೂಎಸ್‌ಎಸ್‌ಬಿ ಕಛೇರಿಗೆ ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್‌ಎಸ್‌ಬಿ ಅಧಿಕಾರಿಗಳು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

.. ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -136ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕ ಮತ್ತು ವಾಹನಗಳ ಹಾಜರಾತಿ ಪುಸ್ತಕವನ್ನು ಸಭೆಯಲ್ಲಿ ನೀಡಿದರು ಹಾಗೂ ಹಲವು ಹಬ್ಬ ಹರಿದಿನಗಳು ಹೆಚ್ಚಾಗಿರುವುದರಿಂದ ಕಸ ವಿಲೇವಾರಿ ಘಟಕಗಳಲ್ಲಿ ಮಿಶ್ರಕಸ ವಿಲೇವಾರಿಯಾಗದಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಮಾನ್ಯ ಅಧ್ಯಕ್ಷರು ಜೆ.ಜೆ.ಆರ್ ನಗರ ಪೊಲೀಸ್ ಠಾಣೆಯಲ್ಲಿ ಮುಖಗವಚ ಧರಿಸದೇ ಓಡಾಡುವರಿಗೆ ವಿಧಿಸಿದ ದಂಡದ ವಿವರವನ್ನು ಹಾಗೂ ರಾತ್ರಿವೇಳೆಯಲ್ಲಿ ಮನಬಂದಂತೆ ಓಡಡುವ ದ್ವಿಚಕ್ರವಾಹನ ಸವಾರರನ್ನು ದಂಡದ ವಿವರವನ್ನು ಕೋರಿದರು ಸಭೆಯಲ್ಲಿ ನೀಡುವಂತೆ ಕೋರಿದರು.

ಜೆ.ಜೆ.ಆರ್ ನಗರ ಪೊಲೀಸ್ ಠಾಣಾ ಪ್ರತಿ ನಿಧಿಯು ದಿನ ನಿತ್ಯ ಹೊಸಹಳ್ಳಿ ಮುಖ್ಯ ರಸ್ತೆ ಮತ್ತು ಇತರೆ ಮುಖ್ಯ ರಸ್ತೆಯಲ್ಲಿ ಮುಖಗವಚವಿಲ್ಲದೆ ತಿರುಗುವವರನ್ನು ಗುರ್ತಿಸಿ ಸ್ಥಳದಲ್ಲಿಯೆ ದಂಡ ವಿಧಿಸಲಾಗುತ್ತಿದೆ ಸರ್ಕಾದ ಆದೇಶದಂತೆ ರಾತ್ರಿಯಲ್ಲಿ ಸುಖಾಸುಮ್ಮನೆ ಓಡಾಡುವ ವಾಹನಗಳನ್ನು ಸೀಜ್ ಮಾಡಿ ಠಾಣೆಯಲ್ಲಿರಿಸಿ ಕಾನೂನಿನಂತೆ ಕ್ರಮಕೈಗೊಳ್ಳಲಾಗುವುದೇಂದು ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಸಂಚಾರಿಸುವ ವಾಹನಗಳ ತಪಸಣೆ ಮಾಡಿ ದಂಡವಿಧಿಸುವ ಹಾಗೂ ಸಂಚಾರಿ ದಟ್ಟಣೆಯ ಬಗ್ಗೆ ಸಭೆಯಲ್ಲಿ ತಿಳಿಸುವಂತೆ ಕೋರಿದರು.

ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆ ಯ ಪ್ರತಿನಿಧಿಯು ಹೊಸಹಳ್ಳಿ ಮುಖ್ಯ ರಸ್ತೆಯಲ್ಲಿ ಅಗತ್ಯಕಂಡ ವಾಹನ ಸವಾರರನ್ನು ಗುರ್ತಿಸಿ ದಾಖಲೆ ಪರಿಶೀಲಿಸಿ ದಾಖಲೆಗಳಿಲ್ಲದ ವಾಹನಗಳನ್ನು ಸೀಜ್ ಮಾಡಿ ಹಾಗೂ ದಂಡ ವಿಧಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಡಾ॥ ಅಲ್ಲಮಪ್ರಭು, ದೂ. 9480685654<br>ಸಹಾಯಕ ನಿರ್ದೇಶಕರು (ಪಶುಪಾಲನೆ ಪಶ್ಚಿಮ) ಬಿ.ಬಿ.ಎಂ.ಪಿ. | ವಾರ್ಡ್‌ನ ನೋಡಲ್ ಅಧಿಕಾರಿ | [signature] 17/01/22 |
| 2 | ಶ್ರೀ ಸತೀಶ್ ಕುಮಾರ್<br>ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 136<br>ಬಿ.ಬಿ.ಎಂ.ಪಿ ದೂ. 9986740382 | ಸದಸ್ಯ ಕಾರ್ಯದರ್ಶಿ | Satish Kumar. A |
| 3 | ಎನ್. ಲಕ್ಷ್ಮಿ ನರಸಿಂಹಯ್ಯ ದೂ. 9845563157<br>ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -136 | ಸದಸ್ಯರು | [signature] |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ)<br>ಜೆ.ಜೆ.ಆರ್ ನಗರ ಉಪ ವಿಭಾಗದ ಪ್ರತಿನಿಧಿ<br>ಶ್ರೀ ಬಾಬು (ಕೆಲಸ ಪರಿವೀಕ್ಷಕರು) 9342582372 | ಸದಸ್ಯರು | V. [signature] |
| 5 | ಆರೋಗ್ಯಾಧಿಕಾರಿಗಳು, ಚಾಮರಾಜಪೇಟೆ ವಿಭಾಗ ರವರ ಪ್ರತಿನಿಧಿ.<br>ಹಿರಿಯ ಆರೋಗ್ಯಾಧಿಕಾರಿಗಳು ಜಿ.ಎಂ. ಮುತ್ಯಾಲು<br>ದೂ. 9916444041 | ಸದಸ್ಯರು | [signature] |
| 6 | ಶ್ರೀ ಉಮೇಶ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ<br>ಪ್ರತಿನಿಧಿ ದೂ. 8735577760 | ಸದಸ್ಯರು | [signature] |
| 7 | ಶ್ರೀ ಮೊಹಮದ್ ಮುಜಾಮೀಲ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ<br>ಪ್ರತಿನಿಧಿ ದೂ. 7349649906 | ಸದಸ್ಯರು | [signature] |
| 8 | ಶ್ರೀಮತಿ ಚಂದ್ರಕಲಾ ದೂ. 8904845720<br>ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 136 | ಸದಸ್ಯರು | [signature] |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ<br>ಪ್ರತಿನಿಧಿಎನ್. ಲಕ್ಷ್ಮಿ ನರಸಿಂಹಯ್ಯ<br>ದೂ. 9845563157 | ಸದಸ್ಯರು | [signature] |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ 9845444 086<br>( ಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>~~ಕುಮಾರ ಸ್ವಾಮಿ~~ ದೂ. ~~9960341644~~ Laxmi Narasimha | ಸದಸ್ಯರು | [signature] |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಂ) ರವರ<br>ಪ್ರತಿನಿಧಿ | ಸದಸ್ಯರು | |
| 12 | ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆ ಯ ಪ್ರತಿನಿಧಿ 9845 444 086<br>ಶ್ರೀ ರಾಮಚಂದ್ರ ಎ. ಎ.ಎಸ್.ಐ ದೂ.~~9902992624~~ | ಸದಸ್ಯರು | [signature] HC8109 |
| 13 | ಜೆ.ಜೆ.ಆರ್ ನಗರ ಪೊಲೀಸ್ ಠಾಣೆ ಯ ಪ್ರತಿನಿದಿ<br>ಶ್ರೀ ವೆಂಕಟೇಶ್ ರವರು ದೂ. 7022288831 | ಸದಸ್ಯರು | Venkatesh T. HC5493 |
| 14 | ವಾರ್ಡ್ 136 ಮಾರ್ಷಲ್, ಮುಬೀನ್ | ಸದಸ್ಯರು | |

Satish Kumar. A
ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 136
ವಾರ್ಡ್ ಹಂತದ ಸಮಿತಿ

[signature] 17/01/2022
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 136